೧	೨	೩	೪	೫	೬
೩೦	ದೊಡ್ಡರಂಗಯ್ಯ ಬಿನ್ ರಂಗಶ್ಯಾವಯ್ಯ	—	—	೧	ಕಡಬಗೆರೆ
೩೧	ನಂಜಪ್ಪ ಬಿನ್ ಕಪನಯ್ಯ	೧೫೯	೦-೩೦	೧	ಕಡಬಗೆರೆ
೩೨	ವಜ್ರಯ್ಯ ಬಿನ್ ನಂಜಯ್ಯ	೨೨	೧-೦೦	೧	ಕಡಬಗೆರೆ
೩೩	ಕೆಂಡಯ್ಯ ಬಿನ್ ಹೊನ್ನಯ್ಯ	೧೫೯	೧-೦೦	೧	ಕಡಬಗೆರೆ
೩೪	ನಂಜುಂಡಯ್ಯ ಬಿನ್ ಹೊನ್ನಯ್ಯ	೨೨	೧-೦೦	೧	ಕಡಬಗೆರೆ
೩೫	ಹೊಸೂರು ತಿಮ್ಮಯ್ಯ ಬಿನ್ ಹೊನ್ನಗಿರಿಗೌಡ	೧೫೯	೧-೦೦	೧	ಕಡಬಗೆರೆ
೩೬	ತಿಮ್ಮಯ್ಯ ಬಿನ್ ಹೋಬಲಯ್ಯ	—	೧-೦೦	೦	ಅವ್ವೇರಹಳ್ಳಿ ಮೇಲ್ಬಾಗ
೩೭	ಬೆಟ್ಟಯ್ಯ	—	೧-೦೦	೨	ಕಡಬಗೆರೆ
೩೮	ಗುಡ್ಡೆತಿಮ್ಮಯ್ಯ ಬಿನ್ ರಂಗರಯ್ಯ	೨೨	೧-೦೦	೧	ಕಡಬಗೆರೆ
೩೯	ಮುನಿರಂಗಯ್ಯ ಬಿನ್ ಗುಡ್ಡೆ ತಿಮ್ಮಯ್ಯ				
೪೦	ಬಜ್ಜಯ್ಯ ಬಿನ್ ಗುಡ್ಡಯ್ಯ	೧೫೯	೧-೦೦	೧	ಕಡಬಗೆರೆ
೪೧	ಹುಲ್ಲೂರಯ್ಯ	—	—	೧	ಕಡಬಗೆರೆ
೪೨	ರಾಜಣ್ಣ	—	—	೧	ಕಡಬಗೆರೆ
೪೩	ಚಂದ್ರಣ್ಣ	—	—	೧	ಕಡಬಗೆರೆ
೪೪	ವಜ್ರಯ್ಯ	—	—	೧	ಕಡಬಗೆರೆ
೪೫	ರಂಗಶ್ಯಾವಯ್ಯ ಬಿನ್ ಹುಲ್ಲೂರಯ್ಯ	೨೦	೧-೦೦	೧	ಕಡಬಗೆರೆ
೪೬	ಮುದ್ದಯ್ಯ ಬಿನ್ ದೊಡ್ಡರಂಗಯ್ಯ	೧೫೯	೧-೦೦	೧	ಅವ್ವೇರಹಳ್ಳಿ ಮೇಲ್ಬಾಗ
೪೭	ದೊಡ್ಡಣ್ಣ	೨೦	೧-೦೦	೧	ಅವ್ವೇರಹಳ್ಳಿ ಮೇಲ್ಬಾಗ
೪೮	ಗೋವಿಂದಯ್ಯ	೨೦	೨-೦೦	೧	ಕಡಬಗೆರೆ
೪೯	ಪುಟ್ಟರಂಗಯ್ಯ	೨೨	೨-೦೦	೧	ಅವ್ವೇರಹಳ್ಳಿ ಮೇಲ್ಬಾಗ
೫೦	ಗೋವಿಂದಯ್ಯ	—	—	೧	ಕಡಬಗೆರೆ

ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಜೋಡಿ ರಸ್ತೆಗಳ ನಿರ್ಮಾಣ

೯೫೩. (೧೫೯೩) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಂಗಳೂರಿನಿಂದ ಅಕ್ಕಪಕ್ಕದ ಊರುಗಳಿಗೆ ಸರಾಗವಾಗಿ ವಾಹನಗಳು ಹೋಗಿ ಬರಲು ಸಾಧ್ಯವಾಗುವಂತೆ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಜೋಡಿ ರಸ್ತೆಗಳಾಗಿ ಪರಿವರ್ತಿಸುವ ಬಗ್ಗೆ ಈ ಹಿಂದೆ ಸರ್ಕಾರದವರು ತೀರ್ಮಾನಿಸಿದ್ದರೆ ?

ಆ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು). —

ಅ) ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಇಂತಹ ಪ್ರಸ್ತಾವನೆ ಇರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅತೀ ಹೆಚ್ಚಿನ ಸಂಚಾರ ದಟ್ಟಣೆ ಇರುವ ರಸ್ತೆಯ ಭಾಗಗಳನ್ನು ಜೋಡಿ ರಸ್ತೆಯನ್ನಾಗಿ ಮಾಡಲು ಅವಕಾಶವಿದೆ.

ಆ) ಬೆಂಗಳೂರು ನಗರ ವ್ಯಾಪ್ತಿಯಿಂದ ನೆಲಮಂಗಲದವರೆವಿಗೂ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ಅನ್ನು ಜೋಡಿ ರಸ್ತೆಯನ್ನಾಗಿ ಮಾಡಲಾಗಿದೆ. ಹಾಗೂ ಬೆಂಗಳೂರು ಹೊಸೂರು ಭಾಗದ ರಾಷ್ಟ್ರೀಯ ಹೆದ್ದಾರಿಯನ್ನು ಜೋಡಿ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಅರಸೀಕೆರೆ ತಾಲ್ಲೂಕ್ ಗಂಡಸಿ ಗ್ರಾಮಕ್ಕೆ ಬಸ್ ಸ್ಟ್ಯಾಂಡ್

೯೫೫ (೧೬೦೦) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗಂಡಸಿ ಕ್ಷೇತ್ರದ ಪ್ರಮುಖ ಸ್ಥಳವಾದ ಗಂಡಸಿಗೆ ಬಸ್ ಸ್ಟ್ಯಾಂಡ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಹೊಸದಾಗಿ ನಿರ್ಮಾಣ ಕಟ್ಟಿಸುವಂತಹ ಯೋಜನೆಯನ್ನು ಈ ಮುಂಗಡ ಪತ್ರದಲ್ಲಿ ಸೇರಿಸಲಾಗಿದೆಯೇ ?

ಇ) ಯೋಜನೆಯ ಅಂದಾಜು ಮೊತ್ತವೆಷ್ಟು, ಬೇಕಾಗುವ ಸ್ಥಳವೆಷ್ಟು ಮತ್ತು ಸ್ಥಳವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬಂದಿದೆ.

ಆ) ಇಲ್ಲ ಆದರೆ ಈ ಯೋಜನೆಯನ್ನು ತೆಗೆದುಕೊಳ್ಳಲು ಪರಿಗಣಿಸಲಾಗುವುದು.

ಇ) ಉದ್ಭವಿಸುವುದಿಲ್ಲ ೧೮೦ x ೨೦೦ ಅಡಿ ನಿವೇಶನವನ್ನು ಸಂಸ್ಥೆಯು ವಶಕ್ಕೆ ಪಡೆದುಕೊಳ್ಳಲಾಗಿದೆ.

ರಾಜ್ಯದಲ್ಲಿರುವ ರಸ್ತೆಗಳಿಗೆ ಮೆಂಟೆನೆನ್ಸ್ ಗ್ರಾಂಟ್ ಕೊಡುವ ಬಗ್ಗೆ

೯೫೬ (೧೫೯೮) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ರಸ್ತೆಗಳನ್ನು ಎಷ್ಟು ದರ್ಜೆಗಳನ್ನಾಗಿ ವಿಂಗಡಿಸಲಾಗಿದೆ ಮತ್ತು ಯಾವ ಯಾವ ದರ್ಜೆಯ ರಸ್ತೆಗಳಿಗೆ ಮೆಂಟೆನೆನ್ಸ್ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ?

ಆ) ಗ್ರಾಮಾಂತರ ಪ್ರದೇಶದ ಜಿಲ್ಲಾ ಪರಿಷತ್ ರಸ್ತೆಗಳಿಗೆ ಮೆಂಟೆನೆನ್ಸ್‌ಗೆ ಎಷ್ಟು ಹಣವನ್ನು ಪ್ರತಿ ಕಿಲೋ ಮೀಟರ್‌ಗೆ ಒದಗಿಸಲಾಗುತ್ತಿದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ರಸ್ತೆಗಳ ದರ್ಜೆ		ವ್ಯಾಪ್ತಿ	ನಿವ ಹಣೆಗೆ ೧೯೯೭-೯೮ ರಲ್ಲಿ ನಿಗದಿಪಡಿಸಿರುವ ಅನುದಾನ (ಲಕ್ಷ ರೂ. ಗಳಲ್ಲಿ)
೧.	ರಾಷ್ಟ್ರೀಯ ಹೆದ್ದಾರಿ	ಅ)	ನಗರಮಿತಿ ರಾಜ್ಯ ಸರ್ಕಾರ	೮೦.೦೦
		ಆ)	ನಗರದ ಹೊರಗೆ ಕೇಂದ್ರ ಸರ್ಕಾರ	ಇನ್ನೂ ನಿಗದಿಪಡಿಸಿಲ್ಲ (ಕೇಂದ್ರ ಸರ್ಕಾರ)